**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.364/2023**

**CW -1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ತನುಜಾ ಉರ್ಫ ನಿವೇದಿತ |
| ಗಂಡ | ಃ | ಬಸವರಾಜ |
| ವಯಸ್ಸು | ಃ | 28 |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಮಸರಕಲ |
| ಪ್ರಮಾಣಿಕರಿಸಿದ ದಿನಾಂಕ | ಃ | **21-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-4 ಸಂಬಂಧಿ, ಚಾಸಾ-5 ತಾಯಿ, ಚಾಸಾ-2, 3 ಮತ್ತು 6 ರಿಂದ 10 ಗೊತ್ತು. 1 ನೇ ಆರೋಪಿ ಮೃತ ಬಸವರಾಜ ನನ್ನ ಗಂಡ. 2 ನೇ ಆರೋಪಿ ನನ್ನ ಮಾವ. ದಿನಾಂಕ 24.02.2019 ರಂದು ನನ್ನ ಮತ್ತು 1 ನೇ ಆರೋಪಿ ವಿವಾಹ ಕೆಂಬಾವಿ ಗ್ರಾಮದ ಹೆಮಾರೆಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ಗಂಡನ ಮನೆಯಲ್ಲಿ ವೈವಾಹಿಕ ಜೀವನ ಮಾಡಲು ಹೋಗಿದ್ದು 2-3 ತಿಂಗಳಗಳ ವರೆಗೆ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ನನಗೆ ಅನಾರೋಗ್ಯದ ಸಮಸ್ಯೆ ಇದುದ್ದರಿಂದ ನಾನು ತವರು ಮನೆಗೆ ಬಂದಿರುತ್ತೇನೆ. ನಂತರ ಆಸ್ಪತ್ರೆಗೆ ತೋರಿಸಿದ ನಂತರ ನಾನು ಗರ್ಭಿಣಿ ಆಗಿರುತ್ತೇನೆ ಎಂದು ತಿಳಿದು ಬಂದಿರುತ್ತದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಪುನಃ ನಾನು ಕೆಂಬಾವಿಗೆ ಗಂಡನ ಮನೆಗೆ ಹೋಗಿರುತ್ತೇನೆ. ನಂತರ ನನ್ನ ಗಂಡ ಮದುವೆ ಸಮಯದಲ್ಲಿ ಕಾರು, ಬಂಗಾರ, ಹಣ ನೀಡಿರುವುದಿಲ್ಲ ಎಂದು ಕಿರುಕುಳ ನೀಡುತ್ತಿದ್ದು ನನಗೆ ಗರ್ಬಿ,ಣಿ ಆದ ನಂತರ ಸಮಸ್ಯೆಗಳು ಆಗುತ್ತಿದ್ದರು ನನ್ನ ಗಂಡ ನನಗೆ ಚಿಕಿತ್ಸೆಯನ್ನು ಕೊಡಿಸಿರುವುದಿಲ್ಲ. ಅಂದಾಜು 1 ವರೆ ತಿಂಗಳುಗಳ ವರೆಗೆ ಗಂಡನ ಮನೆಯಲ್ಲಿ ಇದ್ದರು ಚಿಕಿತ್ಸೆ ಕೊಡಿಸದೇ ಇದುದ್ದರಿಂದ ನಾನು ನನ್ನ ತಂದೆಗೆ ಫೋನ್ ಕರೆ ಮಾಡಿ ಸದರಿ ವಿಷಯವನ್ನು ತಿಳಿಸಿ ನನ್ನನ್ನು ಕರೆದುಕೊಂಡು ಹೋಗುವಂತೆ ಹೇಳಿದ್ದು ಆಗ ನನ್ನ ತಂದೆ ಬಂದು ನನ್ನನ್ನು ತವರು ಮನೆಗೆ ಕರೆದುಕೊಂಡು ಹೋಗಿ ರಾಯಚೂರು ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಿರುತ್ತಾರೆ. ವೈಧ್ಯರು ನನಗೆ ಬೆಡ್ ರೆಸ್ಟ ಮಾಡಲು ಹೇಳಿದ್ದು ಸದರಿ ವಿಷಯವನ್ನು ನನ್ನ ತಂದೆ ನನ್ನ ಗಂಡನಿಗೆ ಸದರಿ ವಿಷಯ ಹೇಳಿ ನನ್ನ ಮಗಳನ್ನು ಈಗ ಕಳುಹಿಸುವುದಿಲ್ಲ ಅಂತ ಹೇಳಿದಾಗ ಅದಕ್ಕೆ ನನ್ನ ಗಂಡ ಕಿರಿಕಿರಿ ಮಾಡಿದರು ನನ್ನ ತಂದೆ ನನ್ನ ಆರೋಗ್ಯದ ಧೃಷ್ಟಿಯಿಂದ ಗಂಡನ ಮನೆಗೆ ಕಳಿಸಿರುವುದಿಲ್ಲ. 7 ತಿಂಗಳ ಗರ್ಬಿಣಿ ಆಗಿದ್ದಾಗ ನನಗೆ ದಿನಾಂಕ 19.11.2019 ರಂದು ಹೆಣ್ಣು ಮಗು ಜನಿಸಿರುತ್ತದೆ. ಪ್ರತಿ

ವಿಷಯವನ್ನು ನನ್ನ ಗಂಡನ ಮನೆಗೆ ನನ್ನ ತಂದೆ ತಿಳಿಸುತ್ತಾ ಬಂದಿದ್ದರು ನನ್ನ ಗಂಡ ಮನೆಯವರು ಬರುತ್ತೇವೆ ಅಂತ ಹೇಳುತ್ತಲೇ ಮಗುವನ್ನು ನೋಡಲು ಬಂದಿರುವುದಿಲ್ಲ ಹಾಗೂ ಮಗುವಿನ ನಾಮಕರಣಕ್ಕೂ ಬಂದಿರುವುದಿಲ್ಲ. ನಂತರ ಗಬ್ಬೂರು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಜುಲೈ 29 ರಂದು ನನ್ನ ಗಂಡ, ಭಾವ ಮತ್ತು ಮಾವ ನಮ್ಮ ಮನೆಗೆ ಬಂದು ನನ್ನನ್ನು ಗಂಡನ ಮನೆಗೆ ಕಳಿಸುವಂತೆ ನಮ್ಮ ಜೊತೆ ತಂಟೆ ಮಾಡಿದ್ದು ಅಲ್ಲದೇ ನಮ್ಮ ತಂದೆಗೆ 2 ತೊಲೆ ಬೆಳ್ಳಿ, 10 ತೊಲೆ ಬಂಗಾರ ನೀಡಿರುವುದಿಲ್ಲ ಎಂದು ಕಿರುಕುಳ ನೀಡಿರುತ್ತಾರೆ. ದಿನಾಂಕ 28.07.2021 ರಂದು ಗಬ್ಬೂರು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಗಬ್ಬೂರು ಪೋಲಿಸರು ಮರುದಿನ ದಿನಾಂಕ 29.07.2021 ರಂದು ಮಸರಕಲ್ ಮನೆ ಹತ್ತಿರ ಬಂದು ಬೆಳಿಗ್ಗೆ 10.30 ರಿಂದ 11.30 ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು, ಪಂಚನಾಮೆಯನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು, ಭಾವಚಿತ್ರವನ್ನು ನಿಪಿ-3 ಎಂದು, ಮದುವೆ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ನಿಪಿ-4 ಎಂದು, ಆಮಂತ್ರಣ ಪತ್ರಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ಆರೋಪಿತರ ಪರ ಬಿ.ವಿ.ಪಿ ವಕೀಲರಿಂದ**

ನಾನು ಬಿ.ಎ ಪದವಿದರಳು ಆಗಿರುತ್ತೇನೆ. ವರದಕ್ಷಿಣೆ ನೀಡಿಲ್ಲ ಎಂದು ನನ್ನ ಗಂಡ ಮತ್ತು ನನ್ನ ಮಾವ ನನಗೆ ಕಿರಿಕಿರಿ ಮಾಡುತ್ತಿದ್ದರು. ನನ್ನ ದೂರಿನಲ್ಲಿ ಗರ್ಬಿಣಿ ಆದ ನಂತರ ನನಗೆ ರಕ್ತಸ್ರಾವ ಆಗತ್ತಿದ್ದ ವಿಷಯವನ್ನು ನನ್ನ ದೂರಿನಲ್ಲಿ ನಮೂದು ಮಾಡಿಲ್ಲ. ನನ್ನ ದೂರಿನಲ್ಲಿ ನನ್ನ ಗಂಡ ನನಗೆ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂಬುದನ್ನು ನಮೂದು ಮಾಡಿಲ್ಲ. ನಾನು ಅನಾರೋಗ್ಯದಿಂದಾಗಿ ತವರು ಮನೆಗೆ ಹೋದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ನೆನಪಿರುವುದಿಲ್ಲ. ತವರು ಮನೆಗೆ ಹೋದ ನಂತರ ಆಸ್ಪತ್ರೆಗೆ ತೋರಿಸಿ ಗರ್ಬಿಣಿ ಆದ ವಿಚಾರ ತಿಳಿದ ನಂತರ ಗಂಡನ ಮನೆಗೆ ಹೋಗಿದ್ದು ಅವರು ಚಿಕಿತ್ಸೆ ಕೊಡಿಸದೇ ಇದುದ್ದರಿಂದ ಪುನಃ ತವರು ಮನೆಗೆ ಬಂದಿರುತ್ತೇನೆ. ವರದಕ್ಷಿಣೆ ಮಾತುಕತೆ ಸಮಯದಲ್ಲಿ ನನ್ನ ದೊಡ್ಡಪ್ಪ ಚನ್ನಬಸವ, ಚಿಕ್ಕಪ್ಪ ಶ್ರೀಶೈಲ, ಗಬ್ಬೂರಿನ ಬೂದೇಪ್ಪ, ಶಿವರಾಜಪ್ಪ ಚಿಕ್ಕಬೂದೂರು, ನನ್ನ ತಂದೆ ಇವರೆಲ್ಲರೂ ಇದ್ದರು. ಸದರಿ ನನ್ನ ಗಂಡನ ಮನೆಯರು ಕಿರುಕುಳ ನೀಡಿರುವುದನ್ನು ನಮ್ಮ ಸಂಬಂಧಿಕರಿಗೆ ಹೇಳಿರುತ್ತೇನೆ. ಕಿರುಕುಳಕ್ಕೆ ಸೇರಿದಂತೆ ಒಂದು ಸಲ ಪಂಚಾಯಿತಿ ಆಗಿರುತ್ತದೆ ಆದರೆ ಪಂಚಾಯಿತಿ ಮಾಡಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ನೆನಪಿರುವುದಿಲ್ಲ. ಸದರಿ ಪಂಚಾಯಿತಿ ಕಲ್ಕೇರಿ ಗ್ರಾಮದಲ್ಲಿ ಆಗಿರುತ್ತದೆ ಅ ಸಮಯದಲ್ಲಿ

ನಾನು ಹಾಜರು ಇರಲಿಲ್ಲ. ಸದರಿ ಪಂಚಾಯಿತಿಯಲ್ಲಿ ಯಾರು ಯಾರು ಸೇರಿದ್ದರು ನಿಖರವಾಗಿ ಗೊತ್ತಿರುವುದಿಲ್ಲ. ನನ್ನ ತಂದೆ ದೊಡ್ಡಪ್ಪ ಎಲ್ಲರೂ ಹೋಗಿದರು.

ನನ್ನ ತಂದೆಗೆ 10 ಎಕರೆ ಜಮೀನು ಇರುತ್ತದೆ. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು ಇರುತ್ತೇವೆ. ಜಮೀನಿನಿಂದ 25-50 ಸಾವಿರ ಆದಾಯ ಬರುತ್ತದೆ. ಕ್ರೂಶರ್ ವಾಹನ ಇದ್ದು ನನ್ನ ತಂದೆ ನಡೆಸುತ್ತಾರೆ. ಸದರಿ ವಾಹನದ ನಂ. ನನಗೆ ಹೇಳಲು ಬರುವುದಿಲ್ಲ. ದಿನಾಂಕ 28.07.2021 ರಂದು ನಾನು ಠಾಣೆಗೆ ದೂರನ್ನು ನೀಡಿದ್ದು ಸದರಿ ದೂರು ನೀಡುವ ಪೂರ್ವದಲ್ಲಿ ಘಟನೆಯಾಗಿದ್ದು ಸದರಿ ಘಟನೆ ದಿನಾಂಕ ತಿಂಗಳು ಹೇಳಲು ನೆನಪಿರುವುದಿಲ್ಲ. ದಿನಾಂಕ 28.07.2021 ರಂದು ಆರೋಪಿತರು ನನ್ನ ತವರು ಮನೆಗೆ ಬಂದಿರುವುದಿಲ್ಲ. ನನ್ನ ಗಂಡ ನನ್ನ ಕಿರಿಕಿರಿಯಿಂದ ಬೆಂಗಳೂರಿನ ರಾಯಲ್ ಲಾಡ್ಜನಲ್ಲಿ ನೇಣು ಬಿಗಿದುಕೊಂಡು ಆಸ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನಾನು ಕಿರುಕುಳ ನೀಡಿರುವುದಿಲ್ಲ ನಾನು ಅನರೋಗ್ಯದಿಂದ ತವರು ಮನೆಗೆ ಬಂದಿದ್ದೆ ಎಂದು ನುಡಿಯುತ್ತಾರೆ. ನನ್ನ ನನ್ನ ತಂದೆ ತಾಯಿ ವಿರುದ್ದ ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ನಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿ. ಆರೋಪಿತರು ನನಗೆ ಎಂದಿಗೂ ವರದಕ್ಷಿಣೆ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಬರೆದುಕೊಟ್ಟಿರುವುದಿಲ್ಲ ಪೋಲಿಸರು ಬರೆದುಕೊಂಡಿರುತ್ತಾರೆ. ಪೋಲಿಸರು ದೂರಿನಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ನನ್ನ ಭಾವ ಮಂಜುನಾಥ ಮತ್ತು ಆತನ ಹೆಂಡತಿ ಯಾದಗಿರಿಯಲ್ಲಿ ಆರ್ಯವೇಧ ವೈಧ್ಯರು ಆಗಿದ್ದರು ಎಂದರೆ ಸರಿ. ಮಂಜುನಾಥ ನನಗೆ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ವಿರುದ್ದ ಪ್ರಕರಣ ದಾಖಲು ಮಾಡಿದ್ದರಿಂದ ಅವರ ಮೇಲಿನ ಸಿಟ್ಟಿನಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಗುನ್ಹೆ ಸ್ಥಳದಲ್ಲಿ ಪೋಲಿಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರು ತ್ತಾರೆ. ಪಂಚನಾಮೆಗೆ 3 ಜನ ಪೋಲಿಸರು ಬಂದಿರುತ್ತಾರೆ. ಅವರ ಹೆಸರು ಗೊತ್ತಿಲ್ಲ ಹಾಗೂ ಪಂಚನಾಮೆ ಕಾಲಕ್ಕೆ ಚಾಸಾ-2 ಮತ್ತು 3 ಹಾಜರು ಇದ್ದರು. ಚಾಸಾ-6 ನಮ್ಮ ಮನೆಯ ಪಕ್ಕದಲ್ಲಿ ಇರುತ್ತಾರೆ. ನನ್ನ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.